ಓ.ಎಸ್. ನಂ. 68/2018

ಪಿ.ಡಬ್ಲ್ಯುಃ 03 (ಬಸವರಾಜ)

ದಿನಾಂಕಃ 21.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ – ಸರಕಾರಿ ವಕೀಲರಿಂದ.

ದಾವೆಯನ್ನು ನನ್ನ ತಂದೆ ಹೂಡಿರುತ್ತಾರೆ. ನನಗೆ ಓದಲು ಬರೆಯಲು ಬರುವುದಿಲ್ಲ. ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿದೆ. ದಾವೆಯನ್ನು ಸುತ್ತಮುತ್ತಲೂ ಒತ್ತುವರಿ ಮಾಡಿರುವ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತಾರೆ. ನನ್ನ ಅಜ್ಜ ಅಂದರೆ ನನ್ನ ತಂದೆಯ ತಂದೆಯ ಹೆಸರು ಮೇಕೆ ಬಸಪ್ಪ. ನನ್ನ ಅಜ್ಜನ ಅಜ್ಜನಿಗೆ 4 ಜನ ಮಕ್ಕಳು. ಈ ಬಗ್ಗೆ ನಮ್ಮ ಬಳಿ ವಂಶವೃಕ್ಷ ಇದೆ. ಅದನ್ನು ನಾನು ಸಲ್ಲಿಸಿರುವುದಿಲ್ಲ. ಈ ಬಗ್ಗೆ ದಾವೆಯಲ್ಲಿ ತೋರಿಸಿರುತ್ತೇನೆ. ಯಾವ ವರ್ಷದಲ್ಲಿ ಭಾಗ ಆಗಿದೆ ಎಂದು ದಾವೆಯಲ್ಲಿ ಬರೆಸಿರುವುದಿಲ್ಲ ಹಾಗೂ ನನಗೆ ಹೇಳಲಾಗುವುದಿಲ್ಲ. ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನ್ನ ತಂದೆ ಹಾಗೂ ಅವರ ಅಣ್ಣ ತಮ್ಮಂದಿರು ಮೌಖಿಕವಾಗಿ ವಿಭಾಗ ಆಗಿರುತ್ತಾರೆ. ಅದರಲ್ಲಿ ದಾವಾ ಸ್ವತ್ತು ನಮ್ಮ ತಂದೆಗೆ ಬಂದಿರುತ್ತದೆ.

ಸದರಿ ಮೌಖಿಕ ವಿಭಾಗ ಆಗುವ ಮೊದಲು ದಾವಾ ಸರ್ವೆ ನಂಬರಿನಲ್ಲಿ ಒಟ್ಟು ಜಮೀನು 2.13 ಸೆಂಟ್ಸ ಇತ್ತು. ಒಟ್ಟು ಜಮೀನು 2.13 ಸೆಂಟ್ಸ ಇತ್ತು ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂಬರ್ 153 ಎ೦/2 ಎಂದು ನಮೂದು ಮಾಡಿರುತ್ತೇನೆ. ಅದು ಮೂಲತಃ ನನ್ನ ಅಜ್ಜನ ಹೆಸರಿನಲ್ಲಿದೆ. ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಸರ್ವೆ ನಂಬರ್ ಪೋಡಿ ಆಗಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಸದರಿ ಪೋಡಿ 1965 ರಲ್ಲಿ ಆಗಿರುತ್ತದೆ. ಭಾಗ ಆದ ನಂತರ ನನ್ನ ತಂದೆಯವರು ಪೋಡಿ ಮಾಡಲು ಅರ್ಜಿ ನೀಡಿರುತ್ತಾರೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಕಿರುತ್ತೇನೆ. ಈ ಬಗ್ಗೆ ನಾನು ವಾದಪತ್ರದಲ್ಲಿ ನಮೂದು ಮಾಡಿರುತ್ತೇನೆ. ನಾನು ಮತ್ತು ನನ್ನ ಕುಟುಂಬದವರು ಕುದುರೆಳವು ಗ್ರಾಮದಲ್ಲಿ ವಾಸ ಮಾಡುತ್ತೇವೆ.

ದಾವಾ ಆಸ್ತಿಯಲ್ಲಿ 16 ಮನೆ ಹಾಗೂ ಒಂದು ಗುಡಿ ಇದೆ ಎಂದರೆ ಸುಳ್ಳು. ಸದರಿ ಮನೆಗಳಲ್ಲಿ 50 ವರ್ಷಗಳಿಂದ ಹರಿಜನ ಕಾಲೋನಿಯಾಗಿ ಅಲ್ಲಿ ಜನರು ವಾಸಿಸುತ್ತಿದ್ದಾರೆ ಎಂದರೆ ಸುಳ್ಳು. ಸದರಿ 16 ಮನೆಗಳು ದಾವಾ ಸ್ವತ್ತಿನಲ್ಲಿ ಇದೆ ಎಂದರೆ ಸುಳ್ಳು. ನಿಪಿ 1 ರಲ್ಲಿ 1968 ನೇ ಇಸವಿಯಿಂದ ದಾವಾ ಸ್ವತ್ತಿನಲ್ಲಿ ಹರಿಜನ ಕಾಲೋನಿ ಇದೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಅದನ್ನು ಸರಕಾರದವರು ತಪ್ಪಾಗಿ ನಮೂದು

ಮಾಡಿರುತ್ತಾರೆ. ನಾನು ಹಾಜರುಪಡಿಸಿರುವ ಪಹಣಿ ಪತ್ರಗಳ ಕಾಲಂ ನಂಬರ್ 09 ರಲ್ಲಿ ಸಾಗುವಳಿ ಎಂದು ಇದೆ ಎಂದರೆ ಸುಳ್ಳು. ಸದರಿ ಪಹಣಿಗಳಲ್ಲಿ ಸರಕಾರದವರ ಹೆಸರು ತಪ್ಪಾಗಿ ನಮೂದು ಮಾಡಿದ್ದಾರೆ ಎಂದು ನಾನು ಹೇಳಿದ್ದು, ಅದನ್ನು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇನೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿಗೆ ನಾನು ಹದ್ದು ಬಸ್ತು ಸರ್ವೆ ಮಾಡಿಸಿರುವುದಿಲ್ಲ. ದಾವಾ ಆಸ್ತಿ ನನ್ನ ಅಜ್ಜನ ಹೆಸರಿನಲ್ಲಿ ಅಥವಾ ನನ್ನ ತಂದೆಯ ಹೆಸರಿನಲ್ಲಿದ್ದ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಯೇ ಎಂದರೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯಲ್ಲಿ ನಾವೇ ಇದ್ದೇವೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಯೇ ಎಂದರೆ ನನ್ನ ತಂದೆಗೆ ಆ ಬಗ್ಗೆ ಗೊತ್ತು. ದಾವಾ ಆಸ್ತಿಯಲ್ಲಿ ಸಿಸಿ ರಸ್ತೆಯಾಗಿರುತ್ತದೆ ಎಂದರೆ ಇಲ್ಲ. ನಾನು ಈಗ ನೋಡುತ್ತಿರುವ ಛಾಯಾಚಿತ್ರದಲ್ಲಿರುವ ನೀರಿನ ಟ್ಯಾಂಕ್ ದಾವಾ ಸ್ವತ್ತಿನಲ್ಲಿ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಹರಿಜನ ಕಾಲೋನಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಜ್ಜ ದಾನ ನೀಡಿರುವ 12 ಸೆಂಟ್ಸನಲ್ಲಿಯೇ ಹರಿಜನ ಕಾಲೋನಿ ಇದೆ ಹಾಗೂ ಸದರಿ ಟ್ಯಾಂಕ್ ಸಹ ಇದೆ. 12 ಸೆಂಟ್ಸ ದಾನ ನೀಡಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ನಾನು ಹಾಜರುಪಡಿಸಿರುವ ನಿಪಿ 8 ರಲ್ಲಿ ಚನ್ನಪ್ಪ, ನಿಂಗಪ್ಪ, ಈಶ್ವರಪ್ಪ, ಚನ್ನಬಸಪ್ಪ ಎದು ನಮೂದು ಇದೆ ಎಂದರೆ ಹೌದು. ಸಾಕ್ಷಿ ಮುಂದುವರೆದು 153ಎಂ/1 ರಲ್ಲಿ ಇದ್ದಾರೆ. ಸದರಿಯವರುಗಳಿಗೆ ಮೇಕೆ ಬಸಪ್ಪರವರೇ ಅದರಲ್ಲಿ ನಮೂದಾಗಿರುವ ಜಮೀನನ್ನು ಮಾರಾಟ ಮಾಡಿರುತ್ತಾರೆ. ನಿಪಿ 8 ರಲ್ಲಿ ಹಿಸ್ಸಾ ಆಗಿರುವ ಸರ್ವೆ ನಂಬರ್ ತೋರಿಸಿರುವುದಿಲ್ಲ, ಸರ್ವೆ ನಂಬರ್ 153ಎಂ ಎಂದು ಮಾತ್ರ ತೋರಿಸಿದ್ದಾರೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿಯವರು 153ಎಂ/1 ರಲ್ಲಿ ಇದ್ದಾರೆ. ಆ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ನನ್ನ ತಾತನಿಂದ ನನ್ನ ತಂದೆಗೆ ಬಂತು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಯೇ ಎಂದರೆ ನನ್ನ ತಾತನ ಹೆಸರಿನಲ್ಲಿ ಸರ್ವೆ ನಂಬರ್ 153 ಇದ್ದು ನನ್ನ ತಂದೆಯ ಹೆಸರಿಗೆ ಅದು ಇನ್ನು ಬದಲಾವಣೆಯಾಗಿರುವುದಿಲ್ಲ. ಆ ರೀತಿ ಹೆಸರು ಬದಲಾವಣೆ ಮಾಡಲು ಕಂದಾಯ ಅಧಿಕಾರಿಗೆ ಅರ್ಜಿ ನೀಡಿರುತ್ತೇನೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಗೆ ಕಂದಾಯ ಕಟ್ಟಿರುವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಯೇ ಎಂದರೆ ನನ್ನ ತಂದೆಯವರು ಕಂದಾಯ ಕಟ್ಟುತ್ತಿದ್ದರು.

ಓ.ಎಸ್. ನಂ. 68/2018

ಪಿ.ಡಬ್ಲ್ಯು 03 (ಬಸವರಾಜ)

ನನ್ನ ಊರಿನಲ್ಲಿ ಬಸಪ್ಪ, ನಿಂಗಪ್ಪ, ಲಿಂಗಪ್ಪ, ಚನ್ನಬಸಪ್ಪ ಎಂಬ ಹೆಸರಿನವರು ಬಹಳ ಜನ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 8 ರಲ್ಲಿ ನಮೂದಾಗಿರುವ ಅಗ್ರಹಾರದ ಬಸಪ್ಪ ನನ್ನ ಅಜ್ಜ ಅಲ್ಲ, ಸದರಿ ಹೆಸರಿನವರು ನಮ್ಮ ಗ್ರಾಮದಲ್ಲಿ ಬಹಳ ಜನ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 50-60 ವರ್ಷಗಳಿಂದ 16 ಜನತಾ ಮನೆಗಳು ಇದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ನನ್ನ ಅಜ್ಜನ ಹೆಸರಾಗಲೀ, ನನ್ನ ತಂದೆಯ ಹೆಸರಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಹರಿಜನ ಗ್ರಾಮದತ್ತ ಜಾಗ ಆಗಿದ್ದರು ಸಹ ದುರುದ್ದೇಶದಿಂದ ಅದು ನಮಗೆ ಸೇರುತ್ತದೆ ಎಂದು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸುಳ್ಳು. ಆದ ಕಾರಣ 1968 ರಿಂದ ಈಗಿನವರೆಗೂ ಸರಕಾರದ ಗ್ರಾಮದತ್ತ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನನ್ನ ದಾವೆಗೆ ಪೂರಕವಾದ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.